# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟದೆ)

**ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ, ಗುವಿಸಕಂನಿ, ಕಲಬುರಗಿ**

ಸಂಖ್ಯೆ: ಅ.ಇಂ(ವಿ)/ಗು/ಉಲೆನಿ/ಲೆಅ/ಸಲೆಅ/ಹಿಸ-1/2019-20/ 10516 ದಿನಾಂಕ: 28/1/2020

## ~: ಪ್ರಕಟಣೆ :~

**ವಿಷಯ:-** ಮೈಕ್ರೋ ಫೀಡರ್ ಫ್ರಾಂಚೈಸಿ ರವರನ್ನು ಆಯ್ಕೆ ಮಾಡಿಕೊಳ್ಳುವ ಕುರಿತು.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಕಲಬುರಗಿ ವೃತ್ತದಲ್ಲಿ ಒಟ್ಟು 26 ಮೈಕ್ರೋ ಫೀಡರ್ ಫ್ರಾಂಚೈಸಿ (ಗ್ರಾಮ ವಿದ್ಯುತ್ ಪ್ರತಿನಿಧಿ) ಸ್ಥಾನಗಳು ಖಾಲಿಯಿದ್ದು, ಗು.ವಿ.ಸ.ಕಂ.ನಿ ತನ್ನ ಕಂದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹಧನ (Incentive) ಆಧಾರದ ಮೇಲೆ ನೇಮಕ ಮಾಡುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೈಕ್ರೋ ಫೀಡರ್ ಫ್ರಾಂಚೈಸಿಯು ಪ್ರತಿ ತಿಂಗಳು ಆ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-4, ಎಲ್.ಟಿ -5 (40 ಹೆಚ್.ಪಿ ಒಳಗಿನ ) ಮತ್ತು ಎಲ್.ಟಿ-6 ಜಕಾತಿಯ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ ಶೇಕಡಾ 100% ರಷ್ಟು ಬಿಲ್ ವಿತರಣೆ ಮಾಡಿ ಗುವಿಸಕಂನಿ ನಿಗದಿಪಡಿಸಿರುವ ಮಾಸಿಕ ಮೂಲ ಕಂದಾಯ ವಸೂಲಾತಿ ಗುರಿಯನ್ನು ಸಾಧಿಸಿದಲ್ಲಿ ರೂ: 12000/- (ಹನ್ನೆರಡು ಸಾವಿರ ರೂಪಾಯಿಗಳು ಮಾತ್ರ) ವನ್ನು **"ಕನಿಷ್ಟ ಖಚಿತ ಪ್ರೋತ್ಸಾಹ ಧನ"** ವಾಗಿ ಕಾರ್ಯನಿರ್ವಹಣೆಯ ಆಧಾರದ ಮೇಲೆ ಸಂಭಾವನೆ ನೀಡಲಾಗುವುದು.

**ಮೈಕ್ರೋ ಫೀಡರ್ ಫ್ರಾಂಚೈಸಿ ಸ್ಥಾನಗಳ ಖಾಲಿ ಇರುವ ಗ್ರಾಮ ಪಂಚಾಯತಿಗಳ ವಿವರ :-**

| ಕ್ರ. ಸಂ. | ಖಾಲಿಯಿರುವ ಪಂಚಾಯತಿಗಳ ಹೆಸರು | ಎಂ.ಎಫ್.ಎಫ್ ಸಂಖ್ಯೆ | ಉಪ-ವಿಭಾಗ | ವಿಭಾಗ | ನೇಮಕ ಮಾಡಿಕೊಳ್ಳುವ ಪ್ರಾಧಿಕಾರಿ |
|---|---|---|---|---|---|
| 1 | ಆಲಗೂಡ | 1 | ಗ್ರಾಮೀಣ ಉಪ-ವಿಭಾಗ, ಕಲಬುರಗಿ | ಗ್ರಾಮೀಣ ವಿಭಾಗ-1, ಕಲಬುರಗಿ | ಕಲಬುರಗಿ ವೃತ್ತ |
| 2 | ಬಸವಪಟ್ಟಣ | 1 | | | |
| 3 | ಹಾಗರಗಾ | 1 | | | |
| 4 | ಮೀಣಜಗಿ | 1 | | | |
| 5 | ಸಿರಸಿಗಿ | 1 | | | |
| 6 | ಹೆಬ್ಬಳಿ | 1 | ಆಳಂದ | | |
| 7 | ಹಾಳ ತಡಕಲ್ | 1 | | | |
| 8 | ತಡೂಳ | 1 | | | |
| 9 | ಮೊಗಾ(ಕೆ) | 1 | | | |
| 10 | ಖಜೂರಿ | 1 | | | |
| 11 | ಮುದಡಗಾ/ಮಡಕಿ | 1 | ಕಡಗಂಚಿ | | |
| 12 | ದಣ್ಣೂರ | 1 | | | |
| 13 | ಕೆರಿ ಅಂಬಲಗಾ | 1 | | | |
| 14 | ದುತ್ತರಗಾಂವ | 1 | | | |
| 15 | ತೆಲ್ಲೂರ | 1 | ಅಫಜಲಪುರ | | |
| 16 | ಮದರಾ(ಬಿ) | 1 | | | |
| 17 | ರಾಮನಗರ | 1 | | | |
| 18 | ಘತ್ತರಗಾ | 1 | | | |
| 19 | ನಂದರಗಾ | 1 | | | |
| 20 | ಭಂಕಲಗಾ | 1 | | | |
| 21 | ಅಳ್ಳಗಿ(ಬಿ) | 1 | | | |
| **ಗ್ರಾಮೀಣ ವಿಭಾಗ-1, ಕಲಬುರಗಿ ಒಟ್ಟು** | | **21** | | | |
| 22 | ನಾಲವಾರ | 1 | ಶಹಾಬಾದ | ಗ್ರಾಮೀಣ ವಿಭಾಗ-2, ಕಲಬುರಗಿ | |
| 23 | ಶೆಳ್ಳಗಿ | 1 | ಕಾಳಗಿ | | |
| 24 | ಬಿರಾಳ(ಬಿ) | 1 | ಜೇವರ್ಗಿ | | |
| 25 | ಮದರಿ | 1 | | | |
| 26 | ಸುಂಬಡ | 1 | ಯಡ್ರಾಮಿ | | |
| **ಗ್ರಾಮೀಣ ವಿಭಾಗ-2, ಕಲಬುರಗಿ ಒಟ್ಟು** | | **5** | | | |
| **ಕಲಬುರಗಿ ವೃತ್ತ ಒಟ್ಟು** | | **26** | | | |

## ಅರ್ಹತೆ :-

1. ಅಭ್ಯರ್ಥಿಯು ಯಾವ ಗ್ರಾಮ ಪಂಚಾಯತಿ ವ್ಯಾಪ್ತಿಯ ಮೈಕ್ರೋ ಫೀಡರ್ ಫ್ರಾಂಚೈಸಿ ಆಗಬಯಸುತ್ತಾನೆಯೋ ಆ ಗ್ರಾಮ ಪಂಚಾಯತಿಯ ಖಾಯಂ ನಿವಾಸಿಯಾಗಿರಬೇಕು (ಸಂಬಂಧಪಟ್ಟ ತಹಶೀಲ್ದಾರ ಕಛೇರಿಯಿಂದ ನೀಡಲ್ಪಟ್ಟ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು).
2. ಅಭ್ಯರ್ಥಿಗಳು **ಪ್ರಕಟಣೆಯ ದಿನಾಂಕದಂದು** 18 ವರ್ಷ ವಯಸ್ಸು ತುಂಬಿರಬೇಕು ಹಾಗೂ 35 ವರ್ಷ ಮೇಲ್ಪಟ್ಟಿರಬಾರದು.
3. ಅಭ್ಯರ್ಥಿಯು ಕನಿಷ್ಟ ಯಾವುದಾದರೂ ಒಂದು ವಿದ್ಯಾರ್ಹತೆಯನ್ನು ಹೊಂದಿರಬೇಕು, ಡಿಪ್ಲೊಮಾ, ಐ.ಟಿ.ಐ, ಜೆ.ಓ.ಸಿ, ಪಿ.ಯು.ಸಿ, ಎಸ್.ಎಸ್.ಎಲ್.ಸಿ, (ಡಿಪ್ಲೊಮಾ, ಐ.ಟಿ.ಐ, ಜೆ.ಓ.ಸಿ, ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆಯಿರುತ್ತದೆ.)
4. ಅಭ್ಯರ್ಥಿಗೆ ಕಡ್ಡಾಯವಾಗಿ ಕನ್ನಡ ಓದಲು ಮತ್ತು ಬರೆಯಲು ಬರಬೇಕು.
5. ಈಗಾಗಲೇ ವಜಾಗೊಂಡಿರುವ ಮೈಕ್ರೋ ಫೀಡರ್ ಫ್ರಾಂಚೈಸಿ ಗಳು ಈ ಆಯ್ಕೆಗೆ ಅರ್ಹರಿರುವುದಿಲ್ಲ.
6. ಸ್ತ್ರೀ ಶಕ್ತಿ ಸ್ವಸಹಾಯ ಗುಂಪಿನ ಸದಸ್ಯರಿಗೆ ಆದ್ಯತೆಯಿರುತ್ತದೆ. ಸಂಘದ ಸದಸ್ಯತ್ವ ಪ್ರಮಾಣ ಪತ್ರ ಹೊಂದಿರಬೇಕು.
7. ಆಯ್ಕೆಯಾದ ಅಭ್ಯರ್ಥಿಗಳು ಇಂಧನ ಇಲಾಖೆಯಿಂದ ಏಕರೂಪವಾಗಿ ಪರಿಷ್ಕರಿಸಿದ **ಎಮ್.ಓ.ಯು. ಪ್ರಕಾರವೇ ಬ್ಯಾಂಕ್ ಗ್ಯಾರಂಟಿಯನ್ನು** ಸಲ್ಲಿಸಬೇಕು.
8. ಅಭ್ಯರ್ಥಿಗಳು ಸ್ಥಾವರಗಳ ವಿದ್ಯುತ್ ಮಾಪಕ ಓದಲು ಹಾಗೂ ವಿದ್ಯುತ್ ಬಿಲ್ಲು ವಸೂಲಾತಿಯನ್ನು ಮಾಡಲು ಹಾಗೂ ಲೆಕ್ಕಗಳ ಬಗ್ಗೆ ಪರಿಣಿತಿಯನ್ನು ಹೊಂದಿರಬೇಕು

## ಆಯ್ಕೆ ವಿಧಾನ:

1. ಪತ್ರದ ಸಂಖ್ಯೆ: ಜೆಸ್ಕಾಂ/ಪ್ರವ್ಯ/ಉಲೆನಿ(ಮಾ.ಸಂ.ಅ)/ಎಫ್-1472/2019-20/ಸಿವೈಎಸ್ 182 ದಿನಾಂಕ 16.07.2019 ರ ಪ್ರಕಾರ ಮೈಕ್ರೋ ಫೀಡರ್ ಫ್ರಾಂಚೈಸಿ ನೇಮಕಾತಿಗಾಗಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ನಿಗದಿತವಾದ ದಿನಾಂಕದಂದು ಸಣ್ಣಪುಟ್ಟ ಲೆಕ್ಕಗಳ ಬಗ್ಗೆ ಕಿರು ಪರೀಕ್ಷೆ ನಡೆಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪಡೆದ ಅಂಕ ಹಾಗೂ ವಿದ್ಯಾಭ್ಯಾಸದಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುವುದು. ಪರೀಕ್ಷೆಯನ್ನು ಸಾಮೂಹಿಕವಾಗಿ ಒಂದೇ ದಿನಾಂಕದಂದು ನಿಗಮ ಕಛೇರಿಯ ನೇತ್ರತ್ವ ನಿರ್ವಹಿಸಲಾಗುವುದು.

## ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆ:-

1. ಆಸಕ್ತ ಅಭ್ಯರ್ಥಿಗಳು ಈ ಕೆಳಗೆ ಪ್ರಕಟಣೆಗೊಂಡ ಅರ್ಜಿ ನಮೂನೆಯಲ್ಲಿ ತಯಾರಿಸಿ ಭರ್ತಿ ಮಾಡಿ ಅದರ ಜೊತೆಗೆ **ಅನ್ವಯಿಸುವ ಪ್ರಮಾಣ ಪತ್ರಗಳ ಸ್ವಯಂ ದೃಢೀಕೃತ ನಕಲು ಪ್ರತಿಗಳೊಂದಿಗೆ ದಿನಾಂಕ: 12.02.2020 ಸಾಯಂಕಾಲ 5:00 ಗಂಟೆಯೊಳಗಾಗಿ** ನೊಂದಣಿ ಅಂಚೆ ಅಥವಾ ಖುದ್ದಾಗಿ ಬಂದು ಈ ಕೆಳಗಿನ ವಿಳಾಸಕ್ಕೆ ಸಲ್ಲಿಸಬೇಕು. ಹಾಗೂ ಅಂಚೆ ಚೀಟಿ ಲಕೋಟೆಯ ಮೇಲೆ **"ಮೈಕ್ರೋ ಫೀಡರ್ ಫ್ರಾಂಚೈಸಿ ಅರ್ಜಿ"** ಎಂದು ನಮೂದಿಸುವುದು **(ಕಚೇರಿಯ ಸಮಯ ಬೆಳಗ್ಗೆ 10:00 ರಿಂದ ಸಾಯಂಕಾಲ 5:00 ಗಂಟೆವರೆಗೆ).**
   **ವಿಳಾಸ:- ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ, ಗುವಿಸಕಂನಿ, ಪರಿವಾರ ಹೊಟೆಲ್ ಎದುರುಗಡೆ, ಕಲಬುರಗಿ-585102.**
2. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ರೂ: 500/- ಡಿ.ಡಿ. ಯನ್ನು ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ, ಗುವಿಸಕಂನಿ, ಕಲಬುರಗಿ/ **Superintending Engineer(E), O&M Circle, GESCOM, Kalaburagi** ರವರ ಹೆಸರಿನಲ್ಲಿ ರಾಷ್ಟ್ರಿಕೃತ ಬ್ಯಾಂಕನಲ್ಲಿ ಪಡೆದು ಲಗತ್ತಿಸುವುದು. (ಈ ಡಿ.ಡಿ.ಯ ಮೊತ್ತವನ್ನು ಯಾವುದೇ ಕಾರಣಕ್ಕೆ ಹಿಂದಿರುಗಿಸಲು ಅವಕಾಶವಿರುವುದಿಲ್ಲ).
3. ಅರ್ಜಿ ಶುಲ್ಕ ಪಾವತಿಸದೇ ಇರುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
4. ವಿದ್ಯಾರ್ಹತೆಯ ನಕಲು ಪ್ರಮಾಣಪತ್ರಗಳನ್ನು ದೃಢೀಕೃತದೊಂದಿಗೆ ಅರ್ಜಿಯ ಜೊತೆಗೆ ಲಗತ್ತಿಸುವುದು.
5. ಕೊನೆಯ ದಿನಾಂಕದ ನಂತರ ತಲುಪಿದ ಮತ್ತು ಅಪೂರ್ಣ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
6. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಯಾವುದೇ ಪ್ರಮಾಣ ಪತ್ರಗಳನ್ನು / ಇತರೆ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
7. **ನೇಮಕಾತಿಗಾಗಿ ಯಾವುದೇ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.**
8. ಇತ್ತೀಚಿನ ಎರಡು ಭಾವಚಿತ್ರ (ಪಾಸ ಪೋರ್ಟ ಸೈಜ್) ಇದರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವುದು.

## ನಿಬಂಧನೆಗಳು:-

1. ಮೈಕ್ರೋ ಫೀಡರ್ ಫ್ರಾಂಚೈಸಿ ಗಳ ಆಯ್ಕೆಯು ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ.
2. ಆಯ್ಕೆಯಾಗಿರುವ ಮೈಕ್ರೋ ಫೀಡರ್ ಫ್ರಾಂಚೈಸಿ ಗಳಿಗೆ ಕಂದಾಯ ಬೇಡಿಕೆ ಮತ್ತು ವಸೂಲಾತಿಯ ಆಧಾರದ ಮೇಲೆ ಪ್ರೋತ್ಸಾಹಧನವು ನಿಗದಿಪಡಿಸಲಾಗುತ್ತದೆ. ಅಲ್ಲದೇ ಇತರೆ ಯಾವುದೇ ಭತ್ಯೆಗಳಿಗೆ ಅರ್ಹರಿರುವುದಿಲ್ಲ.
3. ಈ ನೇಮಕಾತಿಯು ಕಾಲಕಾಲಕ್ಕೆ ಬದಲಾಗುವ ಕಂಪನಿಯ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.
4. ನೇಮಕಾತಿ ಪ್ರಾಧಿಕಾರವು ಯಾವುದೇ ಸಂದರ್ಭದಲ್ಲಿ ನೇಮಕಾತಿ ಆದೇಶವನ್ನು ಹಿಂಪಡೆಯುವ ಅಧಿಕಾರವನ್ನು ಹೊಂದಿರುತ್ತದೆ.
5. ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣ ಪತ್ರ ಮತ್ತು ದಾಖಲೆ ಪತ್ರಗಳು ಸುಳ್ಳು ಮತ್ತು ಅವ್ಯವಹಾರ ಎಂದು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಮೈಕ್ರೋ ಫೀಡರ್ ಫ್ರಾಂಚೈಸಿ ನೇಮಕಾತಿಯಿಂದ ವಜಾಗೊಳಿಸಲಾಗುವುದು.

## ಅರ್ಜಿಯೊಂದಿಗೆ ಸಲ್ಲಿಸಬೇಕಾದ ಲಗತ್ತುಗಳು:-

1. ಎಸ್.ಎಸ್.ಎಲ್.ಸಿ ಹಾಗೂ ಇತರೆ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು (ನಕಲು ಪ್ರತಿ ದೃಢೀಕೃತದೊಂದಿಗೆ).
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಸಂಬಂಧಪಟ್ಟ ತಹಶೀಲ್ದಾರ ಕಛೇರಿಯಿಂದ ನೀಡಿರುವುದು).
3. ವಾಸಸ್ಥಳ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು. (ಸಂಬಂಧಪಟ್ಟ ತಹಶೀಲ್ದಾರ ಕಛೇರಿಯಿಂದ ನೀಡಿರುವುದು). (ನಕಲು ಪ್ರತಿ ದೃಢೀಕೃತದೊಂದಿಗೆ).
4. ರಾಷ್ಟ್ರಿಕೃತ ಬ್ಯಾಂಕಿನಿಂದ ತೆಗೆದುಕೊಂಡಿರುವ ರೂ: 500/- ಮೌಲ್ಯದ ಡಿಡಿ (Original).
5. ಇತ್ತೀಚಿನ ಎರಡು ಭಾವಚಿತ್ರ (ಪಾಸ ಪೋರ್ಟ ಸೈಜ್).
6. ಚುನಾವಣೆ ಚೀಟಿ /ಆಧಾರ ಕಾರ್ಡ/ ಪಡಿತರ ಚೀಟಿಯ ಪ್ರತಿ. (ನಕಲು ಪ್ರತಿ ದೃಢೀಕೃತದೊಂದಿಗೆ).
7. ತಮ್ಮ ಹೆಸರಿಗೆ ಇರುವ ರಾಷ್ಟ್ರಿಕೃತ ಬ್ಯಾಂಕಿನ ಚಾಲ್ತಿಯಲ್ಲಿರುವ ಪಾಸ ಬುಕ್ಕಿನ ಪ್ರತಿ (ನಕಲು ಪ್ರತಿ ದೃಢೀಕೃತದೊಂದಿಗೆ).

ಅಧೀಕ್ಷಕ ಇಂಜಿನಿಯರು(ವಿ),
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಕಲಬುರಗಿ.

# ಮೈಕ್ರೋ ಫೀಡರ್ ಫ್ರಾಂಚೈಸಿ (ಗ್ರಾಮ ವಿದ್ಯುತ್ ಪ್ರತಿನಿಧಿ) ನೇಮಕಾತಿ ಅರ್ಜಿ ನಮೂನೆ

ಇತ್ತೀಚಿನ ಪಾಸಪೋರ್ಟ ಅಳತೆಯ ಭಾವಚಿತ್ರ

| | | | |
|---|---|---|---|
| ಅಭ್ಯರ್ಥಿ ಹೆಸರು ಮತ್ತು ಪೂರ್ಣ ವಿಳಾಸ (ಎಸ್.ಎಸ್.ಎಲ್.ಸಿ/10 ನೇ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ) | | | |
| ತಂದೆ ಹೆಸರು (ಎಸ್.ಎಸ್.ಎಲ್.ಸಿ/10 ನೇ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ) | | | |
| ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ/10 ನೇ ಅಂಕಪಟ್ಟಿಯಲ್ಲಿ ನಮೂದಿಸಿರುವಂತೆ) | | | |
| ಲಿಂಗ | | ಗಂಡು/ ಹೆಣ್ಣು (√) | |
| ವೈವಾಹಿಕ ಸ್ಥಿತಿ | | ವಿವಾಹಿತ/ ಅವಿವಾಹಿತ (√) | |
| ವಿದ್ಯಾರ್ಹತೆ ಮತ್ತು ಪ್ರಮಾಣ ಪತ್ರ ಲಗತ್ತಿಸುವುದು | | | |
| ಕ್ರ ಸಂ | ವಿದ್ಯಾರ್ಹತೆ | ಅಂಕಪಟ್ಟಿಯಲ್ಲಿರುವಂತೆ ಗರಿಷ್ಟ ಅಂಕಗಳನ್ನು ಭರ್ತಿ ಮಾಡುವುದು | ಅಂಕಪಟ್ಟಿಯಲ್ಲಿರುವಂತೆ ಗಳಿಸಿದ ಅಂಕಗಳನ್ನು ಭರ್ತಿ ಮಾಡುವುದು |
| 1 | ಎಸ್.ಎಸ್.ಎಲ್.ಸಿ | | |
| 2 | ಪಿ.ಯು.ಸಿ | | |
| 3 | ಐ.ಟಿ.ಐ/ ಜೆ.ಓ.ಸಿ | | |
| 4 | ಡಿಪ್ಲೊಮಾ | | |
| ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರದ ಪ್ರತಿ ಲಗತ್ತಿಸುವುದು | | ಜಾತಿ-----------, ಪ್ರವರ್ಗ------------<br>ವಾರ್ಷಿಕ ಆದಾಯ------------------- | |
| ಗ್ರಾಮ ಪಂಚಾಯತಿ ಹೆಸರು | | | |
| ವಾಸಸ್ಥಳ ಪ್ರಮಾಣ ಪತ್ರ ಸಂಬಂಧಪಟ್ಟ ತಹಸಿಲ್ದಾರದಿಂದ ಪಡೆದು ಸಲ್ಲಿಸುವುದು. | | | |
| ತಮ್ಮ ಹೆಸರಿಗೆ ಇರುವ ರಾಷ್ಟ್ರೀಕೃತ ಬ್ಯಾಂಕ್ ಪಾಸ ಬುಕ್ಕಿನ ನಕಲು ಪ್ರತಿ ಲಗತ್ತಿಸುವುದು | | | |
| ಹಣ ಪಾವತಿಯ ವಿವರ | | | |
| ಬ್ಯಾಂಕಿನ ಹೆಸರು<br>ಡಿ.ಡಿ. ನಂ. ದಿನಾಂಕ<br>ರೂಪಾಯಿಗಳು | | | |
| ಚುನಾವಣೆ ಚೀಟಿ /ಆಧಾರ ಕಾರ್ಡ/ ಪಡಿತರ ಚೀಟಿಯ ಪ್ರತಿ ಲಗತ್ತಿಸುವುದು | | | |
| ಮೊಬೈಲ್ ಸಂಖ್ಯೆ | | | |

**ಸೂಚನೆ:- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12.02.2020 ಸಾಯಂಕಾಲ 5:00 ಗಂಟೆಯೊಳಗಾಗಿ.**

**ದಿನಾಂಕ:**

**ಅಭ್ಯರ್ಥಿಯ ರುಜು**